ಕಾರ ಕೊಡಬೇಕು. ಮತ್ತು ಈ ಬಗ್ಗೆ ಸಹಕಾರಿ ಇಲಾಖೆಯೂ ಕೂಡ ಸಹಾಯ ಮಾಡುತ್ತದೆ, ತಾವು ಗಳು ಕೂಡ ಸಹಾಯ ಮಾಡಿ ಆ ಜನಗಳಿಗೆ ಸಹಾಯವಾಗುವಂತೆ ಅವರನ್ನು ಹೆಚ್ಚು ಶೋಷಣೆ ಮಾಡದೇ ಇರುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡೋಣ.

ಶ್ರೀ ಎ. ರಾಮಚಂದ್ರ.—ಮಾನ್ಯ ಆರಣ್ಯ ಸಚಿವರು ಹೇಳಿದರು ಅವರು ರಿಜಿಸ್ಟರ್ಡ್ ಮಾಡಿಸಿ ಕೊಂಡು ಸರ್ಟಿಫಿಕೇಟ್ ತೆಗೆದುಕೊಂಡು ಬರುತ್ತಾರೆ ಎಂದು ಹೇಳಿದರು. ಅದಕ್ಕೆ ನಾನು ಹೇಳುತ್ತೇನೆ, ಈ ರಿಜಿಸ್ಟರ್ಡ್ ಅನ್ನು ಯಾರು ಮಾಡುತ್ತಾರೆ ಅನ್ನುವುದನ್ನು ತಾವು ಗಮನಿಸಬೇಕು. ಒಬ್ಬ ಹರಿಜನ ಸದಸ್ಯನೂ ಇದರಲ್ಲಿ ಇಲ್ಲ. ನಿಮ್ಮ ರಿಜಿಸ್ಟ್ರಾರ್‌ರವರಿಂದ ಈ ಬಗ್ಗೆ ನಿಮಗೇನಾದರೂ ರಿಪೋರ್ಟ್ ಬಂದರೆ ಆದರ ಆಧಾರದ ಮೇಲೆ ನೀವು ಕೊಡುತ್ತೀರಿ. ನಾನು ಹೇಳುತ್ತೇನೆ, ನಿಮ್ಮ ರೀತಿಯಲ್ಲಿ ಈ ರಿಜಿಸ್ಟ್ರೇಷನ್ ಮಾಡಿಸುವುದನ್ನು ಒಪ್ಪಿಕೊಳ್ಳುವುದಾದರೆ ನಿಮ್ಮ ಇಲಾಖೆಯ ರಿಪೋರ್ಟಿನಲ್ಲಿ ಏನೋ ಕೈವಾಡ ಇದೆ ಎಂದು ಅನುಮಾನ ಪಡಬೇಕಾಗುತ್ತದೆ. ಇದನ್ನು ತಾವು ಗಮನಿಸಬೇಕು ಏತಕ್ಕೆಂದರೆ ನಮ್ಮ ಮಂಗಳೂರು ಜಿಲ್ಲೆಯಲ್ಲಿ ಯಾವ ಯಾವ ತರಹ ಸೊಸೈಟಿಗಳು ಇವೆ ಎನ್ನುವುದನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಜಿ. ರಾಮೇಗೌಡ.—ಇದು ಸರ್ಕಾರದ ಇಲಾಖೆಯ ರಿಪೋರ್ಟ್. ಕೋ-ಆಪರೇಷನ್ ಡಿಪಾರ್ಟ್‌ಮೆಂಟಿನ ಒಬ್ಬ ದೊಡ್ಡ ಅಧಿಕಾರಿ ಏನು ಇದ್ದಾರೆ ಅವರ ಇಲಾಖೆಯಿಂದ ಬಂದ ರಿಪೋರ್ಟ್‌ನಲ್ಲಿ ನಂಬಿಕೆ ಇಡದೇ ಹೋದರೆ ಬಹುಶಃ ಅವರು ಇನ್ನಾವುದರಲ್ಲಿ ನಂಬಿಕೆ ಇಟ್ಟಾರು. ನನಗೆ ಅರ್ಥವಾಗುವುದಿಲ್ಲ. ಮಾನ್ಯ ಸದಸ್ಯರು ಇದನ್ನು ನಂಬಬೇಕು. ಏನಾದರೂ ಇದರಲ್ಲಿ ಮೋಷಣೆ ನಡೆಯುತ್ತಾ ಇದ್ದರೆ ಅದನ್ನು ಬರೆಯೋಣ.

ಶ್ರೀ ಕಾಪು ಸಂಜೀವಶೆಟ್ಟಿ.—ಈ ಹರಿಜನ ಸೊಸೈಟಿಯಲ್ಲಿರುವ ಮೆಂಬರ್ಸ್ ಯಾರು ಯಾರು ಇದ್ದಾರೆ ಅನ್ನುವುದನ್ನು ನೋಡಬೇಕು. ಇದರ ಮೇಲೆ ಬೇಕಾದಷ್ಟು ಆರೋಪ ಇದೆ. ಆದರೂ ಕೂಡ ಇದನ್ನು ರಿಜಿಸ್ಟರ್ಡ್ ಮಾಡಿದ್ದಾರೆ. ಇದರಲ್ಲಿ ಯಾರು ಯಾರು ಕೆಲಸ ಮಾಡುತ್ತಿದ್ದಾರೆ, ಅದು ಚೆನ್ನಾಗಿ ನಡೆಯುತ್ತದೆಯೇ ಎನ್ನುವುದನ್ನು ನೋಡಿ ರಿಜಿಸ್ಟರ್ಡ್ ಮಾಡಬೇಕು. ಇದರಲ್ಲಿ ಮೋದಲೇ ಬೇಕಾದಷ್ಟು ಆರೋಪಗಳು ಇವೆ.

ಶ್ರೀ ಜಿ. ರಾಮೇಗೌಡ.—ರಿಜಿಸ್ಟರ್ಡ್ ಮಾಡಿರುವ ಸಹಕಾರ ಸಂಘಗಳ ಮೇಲೆ ಆರೋಪ ಹೊರಿಸುವುದಕ್ಕೆ ನಾನು ಸಿದ್ಧನಿಲ್ಲಾ. ಇದರ ಬಗ್ಗೆ ರಿಜಿಸ್ಟ್ರಾರ್‌ರವರಿಂದ ರಿಪೋರ್ಟ್ ಬರಲಿ, ಆದರಲ್ಲಿ ಏನೇನು ಮೋಸ ನಡಿದಿದೆ, ಏನೇನು ವಂಚನೆ ಮಾಡಿದ್ದಾರೆ ಮತ್ತು ಏನೇನು ದಗ ಮಾಡಿದ್ದಾರೆ ನೋಡೋಣ. ಅಂಥಾದ್ದೇನಾದರೂ ಇದ್ದರೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳೋಣ.

Message from the Speaker—L.A. Announcement

MR. SPEAKER.—I have received a message from the Chairman, Legislative Council, as follows.—

> "As required by rule 106 of the Rules of Procedure and Conduct of Business in the Karnataka Legislative Council I send herewith the Karnataka Electricity Supply Undertaking (Acquisition) (Amendment) Bill, 1978 which has been agreed to by the Legislative Council without amendment on 22nd August, 1978."